# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ : 211 (1702)
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 14/03/2022.
4. ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2020ರ ಜುಲೈ ಮತ್ತು ಸೆಪ್ಟೆಂಬರ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಸಮರ್ಪಕ ಮೌಲ್ಯ ಮಾಪನ ಮಾಡಿದ ಮೌಲ್ಯ ಮಾಪಕರಿಂದ ವಸೂಲು ಮಾಡಿದ ದಂಡದ ಮೊತ್ತವೆಷ್ಟು; ಇನ್ನು ಎಷ್ಟು ದಂಡದ ಮೊತ್ತವನ್ನು ವಸೂಲು ಮಾಡಬೇಕಾಗಿದೆ; ಯಾವಾಗ ವಸೂಲು ಮಾಡಲಾಗುವುದು; | 2020 ರ ಜುಲೈ ಮತ್ತು ಸೆಪ್ಟಂಬರ್ ಮಾಹೆಯಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅಸಮರ್ಪಕ ಮೌಲ್ಯಮಾಪನ ಮಾಡಿದ ಶಿಕ್ಷಕರುಗಳ ಸಂಖ್ಯೆ 4317 ಇರುತ್ತದೆ.<br><br>ಈ ರೀತಿ ಅಸಮರ್ಪಕ ಮೌಲ್ಯ ಮಾಪನ ಮಾಡಿದ ಒಟ್ಟು 4317 ಶಿಕ್ಷಕರುಗಳಿಗೆ ಅಂಕಗಳ ವ್ಯತ್ಯಾಸದ ಅನುಸಾರ ರೂ.51,26,600 ಗಳ ದಂಡವನ್ನು ವಿಧಿಸಲಾಗಿದೆ. ಈ ದಂಡದ ಮೊತ್ತದಲ್ಲಿ ಈವರೆಗೆ ರೂ. 10,56,400/- ಗಳು ವಸೂಲಾಗಿದ್ದು, ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಶಾಲೆಗಳು 2020-21ನೇ ಸಾಲಿನಲ್ಲಿ ಮುಚ್ಚಲ್ಪಟ್ಟಿದ್ದ ಕಾರಣದಿಂದ ದಂಡ ವಸೂಲಾತಿಯ ಪ್ರಮಾಣವು ಕಡಿಮೆಯಾಗಿರುತ್ತದೆ. ಬಾಕಿ ದಂಡದ ಮೊತ್ತವನ್ನು ವಸೂಲು ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>1. 2019-20 ನೇ ಸಾಲಿನಲ್ಲಿ ಕೋವಿಡ್-19 ಹಿನ್ನಲೆಯಲ್ಲಿ ಪರೀಕ್ಷೆಗಳು ವಿಳಂಬವಾಗಿದ್ದು ಪರೀಕ್ಷಾ ಕಾರ್ಯಗಳ ನಂತರ ದಂಡ ವಸೂಲಾತಿಗೆ ಕ್ರಮವಹಿಸಲಾಗಿದೆ. ಶಾಲಾ ಮುಖ್ಯ ಶಿಕ್ಷಕರ ಲಾಗಿನ್‌ಗಳಿಗೆ ಶಿಕ್ಷಕರವಾರು ದಂಡದ ವಿವರವನ್ನು ಅಪ್‌ಲೋಡ್ ಮಾಡಲಾಗಿದ್ದು ಶಿಕ್ಷಕರಿಂದ ವಸೂಲು ಮಾಡಿ ಮಂಡಳಿಗೆ ಪಾವತಿಸಲು ಆಯಾ ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸೂಚಿಸಲಾಗಿದೆ.<br>2. ಜಿಲ್ಲಾ ಉಪನಿರ್ದೇಶಕರ ವಿಡಿಯೋ ಸಂವಾದಗಳು, ಟೆಲಿ ಕಾನ್ಫರೆನ್ಸ್‌ಗಳು ಮತ್ತು ನೋಡಲ್ ಅಧಿಕಾರಿಗಳ ಸಭೆಯಲ್ಲಿ ವಸೂಲಾತಿಗೆ ಕ್ರಮವಹಿಸಲು ಸೂಚಿಸಲಾಗಿದೆ.<br>3. ಜಿಲ್ಲಾವಾರು ಬಾಕಿ ವಸೂಲು ಮಾಡಬೇಕಾಗಿರುವ ಮೊತ್ತದ ವಿವರವನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ನೀಡಿ ವಸೂಲಾತಿಗೆ ಸೂಚಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಆ) | ಅಸಮರ್ಪಕ ಮೌಲ್ಯ ಮಾಪನ ಮಾಡಿದ ಕಾರಣ ವಿನಾಕಾರಣ ತೊಂದರೆಗೆ ಒಳಗಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಆ ವಿದ್ಯಾರ್ಥಿಗಳಿಗೆ ಯಾವ ರೀತಿಯ ಪರಿಹಾರ ನೀಡಲಾಗಿದೆ; | ➢ ಮರುಮೌಲ್ಯಮಾಪನಕ್ಕೆ ಒಟ್ಟು ಸ್ವೀಕೃತವಾದ 19826 ಅರ್ಜಿಗಳ ಪೈಕಿ 06 ಕ್ಕಿಂತ ಕಡಿಮೆ ಅಂಕ ವ್ಯತ್ಯಾಸವಾಗಿರುವ ಪ್ರಕರಣಗಳು 15591 ಸಂಖ್ಯೆಯಲ್ಲಿದ್ದು ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಅಂಕಗಳನ್ನು ಸರಿಪಡಿಸಲಾಗಿದೆ.<br>➢ 06 ಕ್ಕಿಂತ ಹೆಚ್ಚು ಅಂಕ ವ್ಯತ್ಯಾಸವಿರುವ ಪ್ರಕರಣಗಳು 4235 ಸಂಖ್ಯೆಯಲ್ಲಿರುತ್ತದೆ. ಈ ರೀತಿಯ ವ್ಯತ್ಯಾಸಗಳನ್ನು ಮರು ಮೌಲ್ಯಮಾಪನದಲ್ಲಿ ಸರಿಪಡಿಸಲಾಗಿದೆ. ಈ ರೀತಿ ಅಸಮರ್ಪಕ ಮೌಲ್ಯಮಾಪನ ಮಾಡಿರುವ ಮೌಲ್ಯಮಾಪಕರುಗಳಿಗೆ ದಂಡ ವಿಧಿಸಲು ಕ್ರಮವಹಿಸಲಾಗಿದೆ.<br>➢ 06 ಕ್ಕಿಂತ ಹೆಚ್ಚು ಅಂಕ ವ್ಯತ್ಯಾಸವಾಗಿರುವ ವಿದ್ಯಾರ್ಥಿಗಳಿಗೆ ಪ್ರತಿ ವಿಷಯಕ್ಕೆ ರೂ. 805/-ಗಳ ಶುಲ್ಕವನ್ನು ಸಹ ಮರುಭರಣ ಮಾಡಲಾಗಿದೆ. |
| ಇ) | ಅಸಮರ್ಪಕ ಮೌಲ್ಯ ಮಾಪನ ಮಾಡಿದ ಕಾರಣ ಕಡಿಮೆ ಅಂಕ ಬಂದ ಕಾರಣಕ್ಕಾಗಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರೆ ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ; ಅಸಮರ್ಪಕ ಮೌಲ್ಯ ಮಾಪನ ಮಾಡಿದವರ ಮೇಲೆ ಕ್ರಿಮಿನಲ್ ಕೇಸು ದಾಖಲಿಸುವ ಕುರಿತು ಸರ್ಕಾರದ ನಿಲುವೇನು? | ಅಸಮರ್ಪಕ ಮೌಲ್ಯಮಾಪನದ ಕಾರಣದಿಂದಾಗಿ ಯಾವುದೇ ಆತ್ಮಹತ್ಯೆ ಪ್ರಕರಣಗಳು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ. |

ಸಂಖ್ಯೆ: ಇಪಿ 60 ಎಸ್ಎಲ್‌ಬಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು